**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 36/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | | ನಾಗೇಶ | ಪ್ರಾ.ಸಾಃ 1 |
| ತಂದೆಯ/ಗಂಡನ ಹೆಸರು | | ಗವಿಯಪ್ಪ | ಚಾಸಾಃ 1 |
| ವಯಸ್ಸು | | 52 | |
| ಕೆಲಸ | | ವ್ಯವಸಾಯ | ಸಾ ಪ್ರ ಬೋ |
| ವಾಸ | | ಚಿಲಕಹಳ್ಳಿ | ದಿಃ 07.03.2023 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಚಾಸಾ 2 ನನ್ನ ಮಗ, ಚಾಸಾ 3 ನನ್ನ ಭಾವನ ಮಗ, ಚಾಸಾ 4 ರಿಂದ 10 ರವರು ನಮ್ಮ ಗ್ರಾಮದವರು. ನ್ಯಾಯಾಲಯದ ಮುಂದಿರುವ ಆರೋಪಿಗಳು ನಮ್ಮ ಗ್ರಾಮದವರಾಗಿರುತ್ತಾರೆ. ಸುಮಾರು 8 ವರ್ಷದ ಹಿಂದೆ ಅಂದರೆ 2016 ರಲ್ಲಿ ನನ್ನ ಮಗನಾದ ಚಾಸಾ 2 ರವರು ನಮ್ಮ ಊರಿನ ಆಲದಮ್ಮನ ದೇವಸ್ಥಾನದ ಆವರಣದಲ್ಲಿ ಕ್ರಿಕೆಟ್ ಆಡುತ್ತಿದ್ದರು. ಆಗ ಆರೋಪಿತರು ಚಾಸಾ 2 ರವರ ಬಳಿ ನಮ್ಮನ್ನು ಆಟಕ್ಕೆ ಸೇರಿಸಿಕೊಳ್ಳುವಂತೆ ಕೇಳಿದ್ದು, ಆಗ ಚಾಸಾ 2 ರವರು ಸೇರಿಸಿಕೊಳ್ಳುವುದಿಲ್ಲ ಎಂದು ಹೇಳಿದ ಕಾರಣ ಆರೋಪಿತರು ಕೈಯಲ್ಲಿದ್ದ ಕ್ರಿಕೆಟ್ ಬ್ಯಾಟಿನಿಂದ 1 ನೇ ಆರೋಪಿ ಚಾಸಾ 2 ರವರ ಬಲಭುಜಕ್ಕೆ ಮತ್ತು ಎಡಭುಜಕ್ಕೆ ಹೊಡೆದಿರುತ್ತಾರೆ. ಗಲಾಟೆ ಬಿಡಿಸಲು ಬಂದ ಚಾಸಾ 3 ರವರಿಗೆ ಆರೋಪಿತರು ಇಬ್ಬರೂ ಸೇರಿಕೊಂಡು ಕ್ರಿಕೆಟ್ ಬ್ಯಾಟಿನಿಂದ ಮೈಕೈಗೆ ಹೊಡೆದಿರುತ್ತಾರೆ. ಆಗ ನಮ್ಮ ಗ್ರಾಮದವರು ಗಲಾಟೆ ಬಿಡಿಸಿರುತ್ತಾರೆ. ನಂತರ ಚಾಸಾ 7 ರವರು ಚಾಸಾ 2 ಮತ್ತು 3 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಈ ಕುರಿತು ಗ್ರಾಮದಲ್ಲಿ ಪಂಚಾಯಿತಿಯನ್ನು ಮಾಡಲು ಕೇಳಿದ್ದು, ಆರೋಪಿತರು ಸದರಿ ಪಂಚಾಯಿತಿಗೆ ಬಾರದ ಕಾರಣ ನಾನು ತಡವಾಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿ ದೂರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿದ್ದು, ಸದರಿ ದೂರನ್ನು ನಿಪಿ -1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಹಾಗೂ ಕ್ರಿಕೆಟ್

ಬ್ಯಾಟುಗಳನ್ನು ನೋಡಿ ಗುರುತಿಸಿರುತ್ತಾರೆ. ಕ್ರಿಕೆಟ್ ಬ್ಯಾಟುಗಳನ್ನು ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾನೆ. ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು )

**ಪಾಟೀ ಸವಾಲುಃ ಶ್ರೀ ಎಪಿಪಿ ಯವರಿಂದಃ**

ದಿನಾಂಕ 22.06.2016 ರಂದು ಸಂಜೆ 05.30 ರ ಸಮಯದಲ್ಲಿ ನಮ್ಮ ಗ್ರಾಮದ ಆಲದಮ್ಮ ದೇವಸ್ಥಾನದ ಆವರಣದಲ್ಲಿ ಆರೋಪಿತರನ್ನು ಚಾಸಾ 2 ರವರು ಕ್ರಿಕೆಟ್ ಆಡಲು ಸೇರಿಸಿಕೊಳ್ಳಿ ಎಂದು ಹೇಳಿದಾಗ ಆರೋಪಿತರು ಹಳೆಯ ದ್ವೇಷದಿಂದ ಚಾಸಾ 2 ರವರಿಗೆ ನಿನ್ನನ್ನು ಆಟಕ್ಕೆ ಸೇರಿಸಿಕೊಳ್ಳುವುದಿಲ್ಲ ಹೋಗೋ ಬೋಳಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ಕೈಯಲ್ಲಿದ್ದ ನ್ಯಾಯಾಲಯದ ಮುಂದಿರುವ ಕ್ರಿಕೆಟ್ ಬ್ಯಾಟಿನಿಂದ ಚಾಸಾ 2 ರವರ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. ಗಲಾಟೆ ಬಿಡಿಸಲು ಹೋದ ಚಾಸಾ 3 ರವರಿಗೂ ಸಹ ಆರೋಪಿತರಿಬ್ಬರೂ ಸೇರಿಕೊಂಡು ನ್ಯಾಯಾಲಯದ ಮುಂದಿರುವ ಕ್ರಿಕೆಟ್ ಬ್ಯಾಟಿನಿಂದ ಎಡಭುಜಕ್ಕೆ ಮತ್ತು ಬೆನ್ನಿನ ಎಡಭಾಗಕ್ಕೆ ಹೊಡೆದಿರುತ್ತಾರೆ ಎಂದರೆ ಸರಿ. ಆಗ ಚಾಸಾ 4 ಮತ್ತು 5 ರವರು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿ. ನಂತರ ನಾನು ಚಾಸಾ 6 ಮತ್ತು 7 ರವರು ಚಾಸಾ 2 ಮತ್ತು 3 ರವರನ್ನು ಆಸ್ಪತ್ರೆಗೆ ಸೇರಿಸಿರುತ್ತೇವೆ ಎಂದರೆ ಸರಿ. ಆರೋಪಿತರು ಪಂಚಾಯಿತಿಗೆ ಬಾರದ ಕಾರಣ ನಾಂಕ 22.06.2016 ರ ಗಲಾಟೆಯ ಕುರಿತು ದಿನಾಂಕ 25.06.2016 ರಂದು ವಿಳಂಬವಾಗಿ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ನಾನು ಈ ಕುರಿತು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿತರ ಪರ ವಕೀಲರು ಮನವಿಯ ಮೇರೆಗೆ ಮುಂದೂಡಿದ್ದು, ಪುನಃ ಕರೆಯಲಾಗುತ್ತದೆ.</u>**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**

ಪ್ರಕರಣವನ್ನು ಪುನಃ ಕರೆಯಲಾಯಿತು.

**<u>ಪಾಟೀ ಸವಾಲು ಶ್ರೀ ಸಿ ಎಲ್ ಬಿ ವಕೀಲರಿಂದ ಆರೋಪಿ ಪರವಾಗಿಃ</u>**

ನಮ್ಮ ಸ್ವಂತ ಊರು ಗುಂಡ್ಲುಪೇಟೆ ತಾಲ್ಲೂಕಿನ ಬೆಳವಾಡಿ. ನನಗೆ ಚಿಲಕಹಳ್ಳಿಯಲ್ಲಿ ಜಮೀನು ಇರುವ ಕಾರಣ ನಾನು ಬೆಳವಡಿ ಮತ್ತು ಚಿಲಕಹಳ್ಳಿಯಲ್ಲಿ ಇರುತ್ತೇನೆ. ಬೆಳವಾಡಿ ಮತ್ತು ಚಿಲಕಹಳ್ಳಿಯ ನಡುವೆ 50 ಕಿ.ಮೀ ಅಂತರ ಇದೆ. ಚಿಲಕಹಳ್ಳಿಯಲ್ಲಿ ಜಮೀನು ಇದ್ದು, ನಾನು ಚಿಲಕಹಳ್ಳಿಯಲ್ಲಿ ವಾಸವಿದ್ದೇನೆ ಎಂಬ ಬಗ್ಗೆ ಪೊಲೀಸರಿಗೆ ಯಾವುದೇ ದಾಖಲಾತಿಯನ್ನು ನೀಡಿಲ್ಲ. ಚಾಸಾ 7 ರವರ ತಂಗಿಯನ್ನು ನಾನು ಮದುವೆಯಾಗಿರುತ್ತೇನೆ. ಚಾಸಾ 7 ರವರು ಚಿಲಕಹಳ್ಳಿಯವರೇ. 1 ನೇ ಆರೋಪಿ ಚಾಸಾ 2 ರವರಿಗೆ ಮುದ್ದೆ ಮಾಲು 1 ಮತ್ತು 2 ರ ಕ್ರಿಕೆಟ್ ಬ್ಯಾಟಿನಿಂದ ಎಡಭುಜ ಮತ್ತು ಬಲಭುಕ್ಕೆ ಹೊಡೆದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಗಲಾಟೆ ಬಿಡಿಸಲು ಬಂದ ಚಾಸಾ 3 ರವರಿಗೂ ಸಹ ಮುದ್ದೆ ಮಾಲು 1 ಮತ್ತು 2 ರ ಬ್ಯಾಟಿನಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ 4 ಮತ್ತು 5 ರವರು ಗಲಾಟೆ ಬಿಡಿಸಿಲ್ಲ

ಹಾಗೂ ಚಾಸಾ 7 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಗಲಾಟೆಯ ಕುರಿತು ಯಾವುದೇ ಪಂಚಾಯಿತಿಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 3 ರವರಿಗೆ ಮುದ್ದೆ ಮಾಲು 1 ಮತ್ತು 2 ರ ಬ್ಯಾಟಿನಿಂದ ಬೆನ್ನಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ 6 ಮತ್ತು 7 ರವರು ಚಾಸಾ 2 ಮತ್ತು 3 ರವರನ್ನು ಆಸ್ಪತ್ರೆಗೆ ಸೇರಿಸಿಲ್ಲ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ನಡೆದಿಲ್ಲ, ಆದಾಗ್ಯೂ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 7 ಮತ್ತು ಆರೋಪಿತರ ಮನೆಯವರ ನಡುವೆ ಬಹಳ ದಿನಗಳಿಂದ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಸದರಿ ವೈಮನಸ್ಸನ್ನು ಮನಸ್ಸಿನಲ್ಲಿಟ್ಟುಕೊಂಡು ಚಾಸಾ 7 ರವರು ನನ್ನ ಮತ್ತು ಚಾಸಾ 2 ರವರ ಮೂಲಕ ಸುಳ್ಳು ದೂರನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಗಲಾಟೆಯಾದಾಗ ನಾನು ಇರಲಿಲ್ಲ. ಚಾಸಾ 7 ರವರ ಮಾತನ್ನು ಕೇಳಿಕೊಂಡು ಸುಳ್ಳು ದೂರನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಮುದ್ದೆ ಮಾಲು 1 ಮತ್ತು 2 ರ ಬ್ಯಾಟುಗಳಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 2 ರವರು ಕ್ರಿಕೆಟ್ ಆಡಲು ಹೋಗಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಕೂಡ ಕ್ರಿಕೆಟ್ ಆಟ ಆಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**